# ಚಿಟ್ಟೆ

ಇವಳ ತುಟಿಯಲ್ಲಿ ಚಿಟ್ಟೆ ಇದ್ದ ಹಾಗೆ
ಕಾಣುವುದು ನನ್ನ ಕಣ್ಣು
ಅವಳಿಗೆ ಸನಿಹ ಇದ್ದಾಗ ನಾನು
ನಾನೇ ಚಿಟ್ಟೆಯಾಗುತ್ತೇನೆನ್ನುವುದು ಅವಳ ಮನಸ್ಸು

ಒಬ್ಬರಿಗೊಬ್ಬರು ಹೂವೇ ಎಂದು ನಮ್ಮಂತೆ
ಪರಿಕಲ್ಪಿಸುವುದು ಕಾವ್ಯದಲ್ಲಿ ಹೇಗೆ ಸಾಧ್ಯ?
ಆದರೆ, ನಿಜ ಜೀವನದಲ್ಲಿ ಸಾಧ್ಯ ಎಂಬಂತೆ
ಬದುಕಿದ್ದೇವಲ್ಲ ನಾವು ಇಷ್ಟು ವರುಷ

ನಮ್ಮ ಮನೆಮುಂದೆ ಎಬ್ಬಿಸಿದ್ದೇವೆ ಇಬ್ಬರೂ ಸೇರಿ
ಒಂದು ಆಹಾ! ಎನುವಂಥ ಹೂದೋಟ
ಅಲ್ಲಿಗೆ ಬಂದು ಕೂರುವ ಚಿಟ್ಟೆಗಳೆಲ್ಲ
ಮೊದಲು ಬರುವುದು ನಮ್ಮ ಹೆಗಲಿಗೆ ಎಂಬ ಅನುಭವ

ಒಂದು ಚಿಟ್ಟೆಗೆ ಇಷ್ಟೆಲ್ಲ ಸಾಧ್ಯತೆಗಳಿವೆಯೇ?
ಇದೆ, ಎಂಬಂತಿದೆ – ಅದು ನಮ್ಮ ಇದಿರುಬಂದಾಗ
ಹಿಡಿದು ಬಿಟ್ಟರೆ ಅದು ನಮ್ಮ ಕೈಯಲ್ಲಿ ಬಿಟ್ಟು
ಹೋಗುವುದಲ್ಲ ಅದರ ಬಹುಬಗೆಯ ಬಣ್ಣ

# ಕೌದಿ



ಇಟ್ಟರೆ ಇವಳು ಒಂದು ಹೆಜ್ಜೆ ಮುಂದೆ
ಮುಂದಿರುವ ನಾನು ಇಡುತ್ತೇನೆ ಎರಡು ಹೆಜ್ಜೆ ಹಿಂದೆ
ಸಮಾನಾಂತರವಾಗಿ ಇರಲಾರದು ನಮ್ಮ ದಾರಿ
ಆಚೆ ಈಚೆ ಹರಿದು ಹರಿದು ಸಮುದ್ರ ಸೇರುವ ಗುರಿ

ಬಡವಿಯಲ್ಲ ಇವಳು ಕೊಡುವ ಕೊಂಬುವುದರಲ್ಲಿ
ಧನಿಕಳೇ ಆಗಿದ್ದಾಳೆ ಕಣ್ಣುಗಳಲ್ಲಿ
ತೋರಿಸುತ್ತಾಳೆ ನನಗೆ ತುಂಬಿ ನಿಂತ ತೆಂಗಿನ ಮರವ
ಆ ಎಳೆನೀರೇ ನಮ್ಮೆದೆಗೆ ಇಳಿದಿದೆ ಎನ್ನುವಂತೆ!

ದೇಹ ಮೀರಿ ನಿಂತ ಹಾಗೆ ಇರುವ ಇವಳ ಸೆಳೆತ
ಸುತ್ತಿ ಬಳಸಿ ಆಗಿ ಹರಿವ ಮಹಾನದಿಗಿಂತ ಮಿಗಿಲು!
ಎರಡು ದಡವೂ ಒಂದೇ ನಮಗೆ, ನಡುವೆ ನಮ್ಮ ಮಕ್ಕಳು
ಈಚೆಯಿಂದ ಆಚೆ ಆಚೆಯಿಂದ ಈಚೆ ದಿನನಿತ್ಯವೂ

ಅವಳು ನನಗೆ ನಾನು ಆಕೆಗೇನು ಕೊಟ್ಟೆ ಎನುವ ಲೆಕ್ಕವು
ನಮ್ಮ ಒಳಗೆ ಇಲ್ಲದಾಗಿ ಸಿಕ್ಕದದರ ಪುಕ್ಕವು
ಅದಕು ಇದಕು ಎಲ್ಲದಕ್ಕೂ ಒಂದೆ ಒಂದು ಮಂಚವು
ಅದರ ಮೇಲೆ ಒಂದೆ ಕೌದಿ ನಾವು ಹೊದ್ದು ಮಲಗಲು